**ವ್ಯಾಖ್ಯಾನ**

# ಒಂದೊಂದವತಾರದೊಳನಂತ ವ್ಯಾಪಾರ

ಉಗಾಭೋಗದ ಚಿಂತನೆ:

**ಒಂದೊಂದವತಾರದೊಳನಂತ ವ್ಯಾಪಾರ**

**ಒಂದೊಂದವಯವದೊಳನಂತ ವ್ಯಾಪಾರ**

**ಒಂದೊಂದುರೋಮದೊಳು ಅಜಭವಾದಿ ಕಾರ್ಯ**

**ಒಂದೊಂದೆ ನಿನ್ನ ಮಹಿಮೆ ಪುರಂದರ ವಿಠಲ**

**ಒಂದೊಂದವತಾರದೊಳನಂತ ವ್ಯಾಪಾರ**

ಶ್ರೀಹರಿಯ ಅವತಾರ ಮತ್ತು ಮೂಲ ರೂಪದಲ್ಲಿ ಭೇದವಿಲ್ಲ. ಅವತಾರ ತಾಳುವುದೇ ಸಜ್ಜೀವರಾದ ದೇವತೆಗಳಿಗೆ ಸೇವಾ ಭಾಗ್ಯ ಕೊಟ್ಟು, ದುಷ್ಟರಿಗೆ ಅವರಿಗೆ ಯೋಗ್ಯವಾದ ತಮೋ ಯೋಗ್ಯ ಸಾಧನೆಯನ್ನು ಮಾಡಿಸಿ, ಅವರವರಿಗೆ ಅವರವರ ಗತಿ ಹೊಂದಿಸಲು.
ಹೀಗಾಗಿ ಒಂದೊಂದವತಾರದಲ್ಲೂ ಅನಂತ ಕಾರ್ಯಗಳನ್ನು ಭಗವಂತ ಮಾಡುತ್ತಾನೆ ಎಂದು ಶ್ರೀ ಪುರಂದರದಾಸಾರ್ಯರು ಈ ಉಗಾಭೋಗದ ಮುಖಾಂತರ ತಿಳಿಸುತ್ತಿದ್ದಾರೆ.

ಮೆಲ್ನೋಟಕ್ಕೆ ಶ್ರೀಹರಿ ಬಲ-ಕಾರ್ಯಕ್ಕೆಂದು ರಾಮ ಕೃಷ್ಣ,ಪರಶುರಾಮಾದಿ ಅವತಾರಗಳನ್ನು ತಾಳಿದ, ಜ್ಞಾನ-ಕಾರ್ಯಕ್ಕೆಂದು ವೇದವ್ಯಾಸ, ದತ್ತ, ಕಪಿಲಾದಿ ಅವತಾರ ಎನ್ನಿಸಿದರೂ, ಎಲ್ಲ ರೂಪಗಳೂ ಸರ್ವ-ಕಾರ್ಯಮಾಡುವವು ಎಂದು ತಿಳಿಯಬೇಕು.

**ಒಂದೊಂದವಯವದೊಳನಂತ ವ್ಯಾಪಾರ --**

ಅವನ ಅವಯವಗಳಿಗೂ ಅವನಿಗೂ ಭೇದವಿಲ್ಲ. ಸ್ವಗತ ಭೇದ ವಿವರ್ಜಿತ

ಪಂಚನಾರೀ ತುರಗ, ನವನಾರೀ ಕುಂಜರದಂತೆ, ಇಲ್ಲಿ ಹೇಗೆ ಒಂದೊಂದು ಅವಯವವೂ ಒಂದೊಂದು ರೂಪವಾಗಿವೆಯೋ ಹಾಗೆ.

ಮತ್ತು

ಒಂದು ರೂಪದಿಂದ ಅನಂತ ವ್ಯಾಪಾರ ಮಾಡುತ್ತಾನೆ

ಅವನ ಒಂದು ಕೃಷ್ಣ ಕೇಶವೇ ಕೃಷ್ಣನಾಗಿ ಬಂದದ್ದು.

**ಒಂದೊಂದು ರೋಮದೊಳು ಅಜಭವಾದಿ ವ್ಯಾಪಾರ** --

ಅಜ ಭವಾದಿಗಳು ಮಾಡುವ ಸೃಷ್ಟಿ ಲಯಗಳನ್ನು ಅವರೊಳಗಿದ್ದು ಮಾಡುವವನೂ ಶ್ರೀಹರಿಯೇ.

ಜಗವನೆಲ್ಲವ ನಿರ್ಮಿಸುವ ನಾಲ್ಮೊಗನೊಳಗೆ ತಾನಿದ್ದು ಸಲಹುವ ಗಗನಕೇಶನೊಳಿದ್ದು

ಸಂಹರಿಸುವನು ಲೋಕಗಳ//

ಎನ್ನುತ್ತಾರೆ ಶ್ರೀ ಜಗನ್ನಾಥದಾಸರು.

ಒಂದು ರೋಮದೊಳು ಅಜಭವಾದಿ ಕಾರ್ಯ ಎಂದರೆ -- ಹೀಗೂ ಹೇಳಬಹುದು --

ಒಂದು ರೋಮ ಕೂಪದಲ್ಲಿಯೇ ಅನಂತಾನಂತ ಬ್ರಹ್ಮಾಂಡ ಧರಿಸಿರುವನು.

**"ಏಕಮಂಡಂ ಬಹುತ್ವೇನ ಪ್ರತ್ಯೇಕಂ ರೋಮಕೂಪಗಮ್/**

**ಬ್ರಹ್ಮಾ$ಪಶ್ಯತ್ ತಥಾ$$ತ್ಮಾನಂ ಹರೇಸ್ತೇಷು ಪೃಥಕ್ ಪೃಥಕ್//**

ಹೇ ಭಗವಂತ ನಿನ್ನ ವ್ಯಾಪಾರ ಅನಂತ ಮಹಿಮೆ ಅಪಾರ ಎಂದು ತಿಳಿದಾಗ ಅವನ ಮೇಲೆ ಭಕ್ತಿ ಹುಟ್ಟುತ್ತದೆ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ